## ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ.6/2022**

**ಚಾಸಾಃ 3/ಪ್ರಾಸಾಃ 1**

**ದಿನಾಂಕಃ 01 -04-2025**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| **ಸಾಕ್ಷಿದಾರರ ಹೆಸರು** | ಮಕ್ತುಮಸಾಬ ಬಿಚ್ಚಗತ್ತಿ |
|---|---|
| ತಂದೆ/ಗಂಡನ ಹೆಸರು | ಮೋದಿನಸಾಬ |
| ವಯಸ್ಸು | 60 ವರ್ಷ |
| ಉದ್ಯೋಗ | ಖಾಸಗಿ ವ್ಯಾಪಾರ |
| ವಾಸ | ನರಗುಂದ |

### ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ

ಚಾಸಾ-2 , ಆರೋಪಿತನ ಪರಿಚಯ ಇಲ್ಲ.

ನನಗೆ ಈಗ ಸುಮಾರು 1 ವರೇ ವರ್ಷದ ಹಿಂದೆ ನರಗುಂದ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಪಂಚನಾಮೆಗೆ ಸಹಿ ಮಾಡಿದ್ದು, ಅದರಲ್ಲಿ ಬರೆದ ವಿಚಾರ ಗೊತ್ತಿಲ್ಲ. ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಒಪ್ಪಿಕೊಂಡಿದ್ದರಿಂದ, ಸ್ಥಳ ಪಂಚನಾಮೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ಮುದ್ದೇಮಾಲನ್ನು ಜಪ್ತ ಮಾಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಪ್ರಾರ್ಥಿಸಿಕೊಂಡರು, ಸದರಿ ಸಾಕ್ಷಿದಾರರು ತಮ್ಮ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿದ್ದು, ಕಾರಣ ಸದರಿ ಸಾಕ್ಷಿದಾರರನ್ನು ಪಾಟೀ ಸವಾಲು ಮಾಡಲು ಮಾನ್ಯ ಸಸಅ ರವರಿಗೆ ಅನುಮತಿ ನೀಡಲಾಯಿತು)**

### ಪಾಟೀ ಸವಾಲುಃ ಮಾನ್ಯ ಸಸಅ ರವರಿಂದ

ದಿ.15-11-2021 ರಂದು ಮುಂಜಾನೆ 7-05 ಗಂಟೆಯ ಸಮಯದಲ್ಲಿ ನಾನು ಮತ್ತು ಚಾಸಾ-2 ರವರು ನರಗುಂದ ಪೊಲೀಸ್ ಠಾಣೆಯ ಹತ್ತಿರ ಹೋಗುವಾಗ, ಚಾಸಾ-4 ರವರು ನನ್ನನ್ನು ಕರೆದು, ಚಾಸಾ-1 ರವರ ಮುಂದೆ ಹಾಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ, ಚಾಸಾ-1 ರವರು ಪ್ರಕರಣದ ಕುರಿತು

ತಮಗೆ ಬಂದ ಮಾಹಿತಿಯನ್ನು ನಮಗೆ ತಿಳಿಸಿ, ಪಂಚರಾಗಲು ಕೇಳಿಕೊಂಡಿದ್ದು, ಅದಕ್ಕೆ ಒಪ್ಪಿ ಅವರೊಂದಿಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಬೆಳಿಗ್ಗೆ 7-45 ಗಂಟೆಗೆ ಸಮಯದಲ್ಲಿ ನರಗುಂದ ಶಹರದ ಆಯಲ್ ಮಿಲ್ ಹತ್ತಿರ ನಿಂತಿದ್ದಾಗ, ಒಬ್ಬ ವ್ಯಕ್ತಿಯು ನೀಲಿ ಬಣ್ಣದ ಲುಂಗಿ, ಬೂದು ಬಣ್ಣದ ಶ್ವೆಟರ್ ಹಾಕಿಕೊಂಡು ಎಡಹೆಗಲ ಮೇಲೆ ಒಂದು ಹಳದಿ ಮತ್ತು ನೀಲಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹೊತ್ತುಕೊಂಡು ಬರುತ್ತಿರುವುದನ್ನು ಕಂಡು ಬರುತ್ತಿದ್ದು ಎಂದರೆ ಸರಿಯಲ್ಲ. ಸಂಶಯದ ಮೇಲೆ ಚಾಸಾ-1 ರವರು ಸದರಿ ವ್ಯಕ್ತಿಯನ್ನು ಹಿಡಿದು ಚೀಲದ ಬಗ್ಗೆ ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚೀಲದಲ್ಲಿ ಸರಾಯಿ ಪ್ಯಾಕೇಟುಗಳು ಇರುವುದನ್ನು ಆತನು ಒಪ್ಪಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನಂತರ, ಚಾಸಾ-1 ರವರು ಆತನನ್ನು ವಿಚಾರಣೆ ಮಾಡಿದಾಗ, ಆತ ತನ್ನ ಹೆಸರು ಹನಮಂತರ ಸಹದೇವಪ್ಪ ರಾಮದುರ್ಗ ಸಾ: ಜಗಾಪೂರ ಪ್ಲಾಟ್ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ.

ನಂತರ, ಚಾಸಾ-1 ರವರು ನಮ್ಮ ಸಮಕ್ಷಮ ಸದರಿ ಚೀಲವನ್ನು ಪರಿಶೀಲನೆ ಮಾಡಿದಾಗ, ಅದರಲ್ಲಿ 90 ಎಮ್ ಎಲ್ ಅಳತೆಯ ಓರಿಜಿನಲ್ ಚೊಯ್ಸು ಡಿಲಕ್ಸ ವಿಸ್ಕಿಯ 35 ಮದ್ಯದ ಪ್ಯಾಕೇಟುಗಳು ಇರುವುದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ, ಸ್ಥಳದಲ್ಲಿ ಚಾಸಾ-1 ರವರು, ನನ್ನ ಮತ್ತು ಚಾಸಾ-2 ರವರ ಸಮಕ್ಷಮ ಬೆಳಿಗ್ಗೆ 7-40 ರಿಂದ 8-40 ರವರೆಗೆ ಸ್ಥಳ ಪಂಚನಾಮೆ ಜರುಗಿಸಿ ಸದರಿ ಎಲ್ಲ ಮದ್ಯದ ಪ್ಯಾಕೇಟುಗಳನ್ನು ಚೀಲದೊಂದಿಗೆ ರಸಾಯನಿಕ ಪರೀಕ್ಷೆಗಾಗಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕುರಿತು ಮುದ್ದೆಮಾಲುಗಳ ಮೇಲೆ ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಚಾರ ತಿಳಿದು, ನಿಪಿ-1 ದಾಖಲೆಗೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ಮುದೆದಮಾಲುಗಳನ್ನು ಪಂಚನಾಮೆಯ ಅಡಿಯಲ್ಲಿ ಪೊಲೀಸರು ಜಪ್ತು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತನೇ, ದಾಳಿ ಸಮಯದಲ್ಲಿ ಪೊಲೀಸರು ಬಂದಿಸಿದ ವ್ಯಕ್ತಿ ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ